


■ ಹಿಂದಿ ಮೂಲ: ಶರದ್ ಸಿಂಗ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

# ಕರವಾಚೌಥ್ ಪ್ರಸಂಗ

ಇದು ರೂಸೋ ಅವರ 'ದಿ ಸೋಷಿಯಲ್ ಕಾಂಟ್ರಾಕ್ಟ್' ಮತ್ತು ನಮ್ಮ ಜೀವನದ ಸಾಮಾಜಿಕ ಒಪ್ಪಂದವಾಗಿತ್ತು. ನಾವು ನಮ್ಮ ಜೀವನದಲ್ಲಿ ಬದುಕುವುದಿಲ್ಲ, ಪ್ರತಿಯಾಗಿ ಅದರೊಂದಿಗೆ ಪ್ರತಿ ಹೆಜ್ಜೆಯಲ್ಲೂ ಒಪ್ಪಂದವನ್ನು ಮಾಡಿಕೊಳ್ಳುತ್ತೇವೆ. ಮನುಷ್ಯ ಕಾಡುಗಳಲ್ಲಿ ಜನಿಸಿದ್ದ. ಉತ್ಪಾದನೆಯ ವೇಳೆಯಲ್ಲಿ ಅವನ ಬಳಿ ಬಟ್ಟೆಗಳಿರಲಿಲ್ಲ, ಮನೆಗಳಿರಲಿಲ್ಲ, ಹೊಲ ಗದ್ದೆಗಳಿರಲಿಲ್ಲ, ಉದ್ಯೋಗಗಳಿರಲಿಲ್ಲ. ಆದರೂ ಜೀವನ ಅದೆಷ್ಟು ಸರಳವಾಗಿರಬೇಕು! ಅಲ್ಪ ಅಗತ್ಯಗಳು ಮತ್ತು ಅಲ್ಪ ಪ್ರಯತ್ನ... ಇಷ್ಟೆ! ಮನುಷ್ಯರಾದ ನಾವೇ ನಮ್ಮ ಜೀವನವನ್ನು ಇಷ್ಟು ಕಷ್ಟ ಮಾಡಿಕೊಂಡಿದ್ದೇವೆ; ಇದರಿಂದಾಗಿ ಈಗ ಉಸಿರಾಡಲು ಸಹ ಕಷ್ಟವಾಗಿದೆ. ನಿತ್ಯ ಹೋರಾಟ, ನಿತ್ಯ ಹೋರಾಟ; ಕಡೆಗೆ ಹೋರಾಟವನ್ನೇ ಮಾಡುತ್ತಾ ಸತ್ತು ಹೋಗುವುದು!

ಓಹ್! ಜೀವನದಲ್ಲಿ ಎಲ್ಲಾದರು ಸರಳತೆ, ಸಹಜತೆ ಇರಬೇಕು.

'ನಿನ್ನ ಹೆಸರಿಗೇ ಮನೆಯನ್ನು ತೆಗೆದುಕೊಳ್ಳಬೇಕಿತ್ತು', ರಿತಿಕ್ ನೋಂದಣಿಯಾದ ನಂತರ ಮನೆಗೆ ಬಂದು ಹೇಳಿದ್ದ.

'ಏಕೆ?' ನಾನು ಕೇಳಿದ್ದೆ.

